# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಹೆಚ್. ಖಲೀಲ್ ರೆಹಮಾನ್, ಅಂದಿನ ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ಗದಗ ಇವರ ಅಮಾನತ್ತಿನ ಅವಧಿ ಬಗ್ಗೆ – ಆದೇಶ.

**ಓದಲಾಗಿದೆ.**

1. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 21 ಇಎನ್‌ಕ್ಯೂ 2004, ದಿನಾಂಕ. 18-04-2009
2. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 81 ಜಿಪಅ 2009 ದಿನಾಂಕ. 15-07-2011
3. ಶ್ರೀ ಹೆಚ್. ಖಲೀಲ್ ರೆಹಮಾನ್, ಅಂದಿನ ಮುಖ್ಯ ಲೆಕ್ಕಾಧಿಕಾರಿ ರವರು ಸಲ್ಲಿಸಿರುವ ಮನವಿ ದಿನಾಂಕ. 29-07-2011
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ರವರ ಪತ್ರ ಸಂಖ್ಯೆ. ಜಿ ಪಂ/ಆ(3)/ಸಿಸಿಎ/ಸಿಆರ್-16/2011-12, ದಿನಾಂಕ. 20-10-2011

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 18-04-2009ರ ಸರ್ಕಾರದ ಆದೇಶದಲ್ಲಿ ಶ್ರೀ ಹೆಚ್. ಖಲೀಲ್ ರೆಹಮಾನ್ ರವರು ಮಂಡನಾಧಿಕಾರಿಯ ಜವಾಬ್ದಾರಿಯನ್ನು ನಿರ್ವಹಿಸದೇ ಕರ್ತವ್ಯಲೋಪವೆಸಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನೀಡಿದ್ದ ನೋಟೀಸಿಗೂ ಉತ್ತರಿಸದೇ ನೇರವಾಗಿ ಅಶಿಸ್ತನ್ನು ಪ್ರದರ್ಶಿಸಿ ಶ್ರೀ ಎಂ.ವಿ. ರಾಜಶೇಖರ, ಸಹಾಯಕ ಇಂಜಿನಿಯರ್ ಮತ್ತು ಶ್ರೀ ಜಿ.ಬಿ. ನಂದಿ, ಕಿರಿಯ ಇಂಜಿನಿಯರ್ ರವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆಯಲ್ಲಿ ಮಂಡನಾಧಿಕಾರಿಗಳ ನಿರ್ಲಕ್ಷತನದಿಂದಾಗಿ ಸರ್ಕಾರಕ್ಕೆ ಪ್ರತಿಕೂಲ ವರದಿ ಬಂದಿದ್ದ ಹಿನ್ನೆಲೆಯಲ್ಲಿ ಶ್ರೀ ಹೆಚ್. ಖಲೀಲ್ ರೆಹಮಾನ್, ಮುಖ್ಯ ಲೆಕ್ಕಾಧಿಕಾರಿ ರವರನ್ನು ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ. (2)ರಲ್ಲಿ ಓದಲಾದ ದಿನಾಂಕ. 15-07-2011ರ ಸರ್ಕಾರದ ಆದೇಶದಲ್ಲಿ ಶ್ರೀ ಹೆಚ್. ಖಲೀಲ್ ರೆಹಮಾನ್, ಅಂದಿನ ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ಗದಗ ರವರು ಈ ಹಿಂದೆ ಶ್ರೀ ಜಿ.ಬಿ. ನಂದಿ ಮತ್ತು ಶ್ರೀ ಎಂ.ವಿ. ರಾಜಶೇಖರ ಎಂಬುವವರ ವಿರುದ್ಧದ ಇಲಾಖಾ ವಿಚಾರಣೆ ಸಮಯದಲ್ಲಿ ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿದ್ದು, ಮಂಡನಾಧಿಕಾರಿಗಳ ಕರ್ತವ್ಯ ಹಾಗೂ ದಾಸ್ತಾವೇಜುಗಳನ್ನು / ಸಾಕ್ಷಿಗಳನ್ನು ಹಾಜರುಪಡಿಸುವಲ್ಲಿ ವಿಫಲರಾಗಿದ್ದರೆಂಬ ಆರೋಪಗಳ ಮೇರೆಗೆ ಸದರಿಯವರ ಕರ್ತವ್ಯ ನಿರ್ಲಕ್ಷತೆ ಹಾಗೂ ದುರ್ನಡತೆಗಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (ii) ರನ್ವಯ ವಾಗ್ದಂಡನೆ ವಿಧಿಸಿ ಆದೇಶ ಹೊರಡಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ. (3)ರಲ್ಲಿ ಓದಲಾದ ದಿನಾಂಕ. 29-07-2011ರಂದು ಶ್ರೀ ಹೆಚ್. ಖಲೀಲ್ ರೆಹಮಾನ್, ಮುಖ್ಯ ಲೆಕ್ಕಾಧಿಕಾರಿ ರವರು ಸಲ್ಲಿಸಿದ್ದ ಮನವಿಯಲ್ಲಿ ಅವರನ್ನು ದಿನಾಂಕ. 18-04-2009 ರಿಂದ 12-09-2009 ರವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವಂತೆ ಕೋರಿದ್ದಾರೆ.

----2

ಮೇಲೆ ಕ್ರಮ ಸಂಖ್ಯೆ. (4)ರಲ್ಲಿ ಓದಲಾದ ದಿನಾಂಕ. 20-10-2011ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ರವರು ಶ್ರೀ ಹೆಚ್. ಖಲೀಲ್ ರೆಹಮಾನ್, ಮುಖ್ಯ ಲೆಕ್ಕಾಧಿಕಾರಿ ರವರನ್ನು ಸರ್ಕಾರವು ಈ ಹಿಂದೆ ಅಮಾನತ್ತನ್ನು ರದ್ದುಪಡಿಸಿ ಸೇವೆಗೆ ಪುನರ್ ಸ್ಥಾಪಿಸಿ ದಿನಾಂಕ. 15-07-2011ರಲ್ಲಿ ವಾಗ್ದಂಡನೆ ವಿಧಿಸಲಾಗಿದ್ದು, ಅಧಿಕಾರಿಗೆ ವಿಧಿಸಿರುವ ಶಿಕ್ಷೆ ಕನಿಷ್ಟ ಶಿಕ್ಷೆಯಾಗಿರುವುದರಿಂದ ಸರ್ಕಾರವು ಮಾಡಿರುವ ನಿರ್ಣಯವನ್ನು ಪುನರ್ ಪರಿಶೀಲನೆ ಮಾಡುವಂತಹ ಅರ್ಹ ಪ್ರಕರಣವಾಗಿರುವುದಿಲ್ಲವೆಂದು ಅಭಿಪ್ರಾಯ ನೀಡಿದ್ದಾರೆ.

ಶ್ರೀ ಹೆಚ್. ಖಲೀಲ್ ರೆಹಮಾನ್, ಮುಖ್ಯ ಲೆಕ್ಕಾಧಿಕಾರಿ ಇವರ ಮನವಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಅವರಿಗೆ ದಿನಾಂಕ. 15-07-2011ರ ಸರ್ಕಾರದ ಆದೇಶದಲ್ಲಿ ವಾಗ್ದಾಂಡನೆ ವಿಧಿಸಿ ಆದೇಶ ಹೊರಡಿಸಿರುವುದರಿಂದ ಅವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತು ಅವಧಿ ಎಂದೇ ಪರಿಗಣಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ. ಗ್ರಾಅಪ 27 ಇಎಸ್‌ಕ್ಯೂ 2011, ಬೆಂಗಳೂರು,**
**ದಿನಾಂಕ. 15-11-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಹೆಚ್.ಖಲೀಲ್ ರೆಹಮಾನ್, ಅಂದಿನ ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರು ದಿನಾಂಕ. 18-04-2009 ರಿಂದ 12-09-2009 ರವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ವೈ.ಸಾಗರ), 15/11/2011
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರಕ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ / ಚಿತ್ರದುರ್ಗ
6. ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
7. ಶ್ರೀ ಹೆಚ್. ಖಲೀಲ್ ರೆಹಮಾನ್, ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ) / (ಸೇವೆಗಳು-ಸಿ)
9. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರದಾನ ಕಾರ್ಯದರ್ಶಿ / ಕಾರ್ಯದರ್ಶಿ/ ಉಪ ಕಾರ್ಯದರ್ಶಿ ಇವರುಗಳ ಅಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
10. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
11. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.